**MVC 668-24 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ S R G, ವಕೀಲರಿಂದಃ**

3. ನಾನು ಸೌತ್ ಇಂಡಿಯಾ ಮಾಲ್ ದಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ 3 ಜನ ಮಕ್ಕಳು. ಕಮಲವ್ವಳು ನನಗೆ ಅತ್ತೆಯಾಗಬೇಕು. ನನ್ನ ಅತ್ತೆ ಅವರ ತಾಯಿಯ ಅಡ್ಡ ಹೆಸರು ಇಟ್ಟುಕೊಂಡಿದ್ದಾರೆ. ನಾನು ನನ್ನ ಮಾವನ ಅಡ್ಡ ಹೆಸರು ಇಟ್ಟುಕೊಂಡಿದ್ದೇನೆ. ಕಮಲವ್ವಳು ನಮ್ಮ ಅತ್ತೆ ಅಲ್ಲ ಅಂದರೆ ಸರಿಯಲ್ಲ. ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ನಾನೊಬ್ಬಳೇ ಮಕ್ಕಳನ್ನು ನೋಡಿಕೊಂಡು ಜೀವನ ನಡೆಸುತ್ತಿದ್ದೇನೆ. ನನ್ನ ಗಂಡ ಮಂಜುನಾಥ ಬಹಳ ದಿನಗಳಿಂದ ವಾಹನ ನಡೆಸುತ್ತಿದ್ದರು. ನನ್ನ ಗಂಡ ಡಿ ಎಲ್ ಇದೆ ಎಂದು ಹೇಳಿದ್ದರು. ಆದರೆ ನನಗೆ ಗೊತ್ತಿಲ್ಲ. ನನ್ನ ಗಂಡನಿಗೆ ಡಿ ಎಲ್ ಇರಲಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಗಂಡ ಡಿ ಎಲ್ ಇಲ್ಲದೆ ಕುಡಿದು ಗಾಡಿ ನಡೆಸುತ್ತಿದ್ದನು ಎಂದು ಪೋಲಿಸರು ಸಲ್ಲಿಸಿದ ದಾಖಲೆಗಳನ್ನು ನಾನೇ ಹಾಜರಪಡಿಸಿದ್ದೇನೆ ಅಂದರೆ ಸರಿಯಲ್ಲ. ನನ್ನ ಗಂಡ ಡಿ ಎಲ್ ಇಲ್ಲದೆ ಕುಡಿದು ನಿಯಂತ್ರಣ ತಪ್ಪಿ ತಾನೇ ಬಂದು ಗೂಡ್ಸ ವಾಹನಕ್ಕೆ ಡಿಕ್ಕಿಪಡಿಸಿದನು ಅಂದರೆ ಸರಿಯಲ್ಲ. ನನ್ನ ಗಂಡ ಗೌಂಡಿ ಕೆಲಸ ಮಾಡುತ್ತಿರಲಿಲ್ಲ ಅಂದರೆ ಸರಿಯಲ್ಲ. ತಿಂಗಳಿಗೆ 25 ಸಾವಿರ ರೂ. ದುಡಿಯುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ಆ ದಿನ ನನ್ನ ಗಂಡ ಕುಡಿದು ವಾಹನ ನಡೆಸುತ್ತಿದ್ದರು ಹಾಗೂ ಅದೇ ರೀತಿ ಗೂಡ್ಸ ವಾಹನದ ಚಾಲಕ ಕುಡಿದು ಗಾಡಿ ನಡೆಸುತ್ತಿದ್ದರೆಂದು ನಿಪಿ.6 ರಲ್ಲಿ ಹೇಳಿರುವುದರಿಂದ ವಿಮೆ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ. ಗೂಡ್ಸ ವಾಹನ ಸರಿಯಾಗಿ ನೋಂದಣಿಯಾಗದೇ ರೋಡಿನ ಮೇಲೆ ಚಲಾಯಿಸಿದ್ದರಿಂದ ವಿಮೆ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರು ಇರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡ ಏಕ ಮುಖ ರೋಡಿನಲ್ಲಿ ವಿರುದ್ಧ ದಿಕ್ಕಿನಲ್ಲಿ ಬಂದು ಗೂಡ್ಸ ವಾಹನಕ್ಕೆ ಡಿಕ್ಕಿಪಡಿಸಿದ್ದಾನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.

**MVC 668-24** **RW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರ ಪರ ಶ್ರೀಮತಿ S R G, ವಕೀಲರಿಂದಃ**

3. ಕ್ರಿಮಿನಲ್ ಕೇಸ ಇನ್ನು ಬಾಕಿ ಇದೆ. ಅಲ್ಲಿ ನನ್ನ ಸಾಕ್ಷಿ ಆಗಿದೆ. ನಾನು ಕ್ರಿಮಿನಲ್ ಕೇಸದಲ್ಲಿ ಆ ದಿನ ನಮ್ಮ ವಾಹನದ ಚಾಲಕನು ಡಿ ಎಲ್ ಇಲ್ಲದೆ ಕುಡಿದು ವಾಹನ ಚಲಾಯಿಸುತ್ತಿದ್ದನು ಎಂದು ಒಪ್ಪಿಕೊಂಡಿದ್ದೇನೆ ಅಂದರೆ ಸರಿಯಲ್ಲ. ಹಾಗೂ ನೋಂದಣಿ ಮಾಡಿಸದೇ ವಾಹನವನ್ನು ಚಾಲಕನಿಗೆ ಚಲಾಯಿಸಲು ಕೊಟ್ಟಿದ್ದೇನೆ ಅಂದರೆ ಸರಿಯಲ್ಲ. ಆ ದಿನ ಮೃತ ಮಂಜುನಾಥ ರವರ ಓವರೇಕ ಮಾಡಿ ಹೋಗಿ ಬೇರೆ ಗಾಡಿಯಿಂದ ಅಪಘಾತ ಹೊಂದಿ ಒಂದು ಕಡೆಗೆ ಬೈಕ್ ಇನ್ನೊಂದು ಮಂಜುನಾಥ ಬಿದ್ದಿದ್ದನು. ನಮ್ಮ ವಾಹನ ಆ ಬೈಕಿನ ಸ್ವಲ್ಪ ಮುಂದೆ ತಳ್ಳಿಕೊಂಡು ಹೋಗಿರುತ್ತದೆ. ನಮ್ಮ ವಾಹನದ ಚಾಲಕನ ತಪ್ಪಿನಿಂದ ಅಪಘಾತವಾಗಿಲ್ಲ. ಮೃತ ವ್ಯಕ್ತಿ ಹೇಗೆ ಮರಣ ಹೊಂದಿದ್ದಾನೆಂದು ಗೊತ್ತಿಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.